# ಉತ್ಪಾದನಾಂಗಗಳ ಬೆಲೆಯ ಸಿದ್ಧಾಂತ :-

ಇದನ್ನು ವಿತರಣೆಯ ಸಿದ್ಧಾಂತ ಎಂದು ಕರೆಯುತ್ತೇವೆ. ರಾಷ್ಟ್ರದಲ್ಲಿ ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಹಣದ ಮೌಲ್ಯವನ್ನು ರಾಷ್ಟ್ರೀಯ ಆದಾಯ ಎನ್ನುತ್ತೇವೆ. ರಾಷ್ಟ್ರೀಯ ಆದಾಯದ ಉತ್ಪಾದನೆಯಲ್ಲಿ ಭಾಗವಹಿಸುವ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳಿಗೆ ಪ್ರತಿಫಲವಾಗಿ, ಗೇಣಿ, ಕೂಲಿ, ಮತ್ತು ಲಾಭದ ರೂಪದಲ್ಲಿ ವಿತರಿಸುವುದನ್ನು ವಿತರಣೆ ಹಂಚಿಕೆ ಎಂದು ಕರೆಯಲಾಗುತ್ತದೆ. ಪ್ರತಿ ಒಂದು ಉತ್ಪಾದನಾಂಗಕ್ಕೆ ಎಷ್ಟು ಪ್ರತಿಫಲ ನೀಡಲಾಗುತ್ತದೆ ಎಂಬುವುದನ್ನು ಉತ್ಪಾದನಾಂಗಗಳ ಬೆಲೆ ಸಿದ್ಧಾಂತದ ಮೂಲಕ ತಿಳಿಯಪಡಿಸಲಾಗುವುದು.

ವಿವಿಧ ಉತ್ಪಾದನಾಂಗಗಳು ಸಲ್ಲಿಸಿದ ಸೇವೆ or ಸೇವೆಗಳಿಗೆ ಅನುಗುಣವಾಗಿ ರಾಷ್ಟ್ರೀಯ ಆದಾಯವು ಹಂಚಿಕೆಯಾಗುವುದಕ್ಕೆ ಕಾರ್ಯಾನುಸಾರ ವಿತರಣೆ ಎಂದು ಹೇಳುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ಉತ್ಪಾದನೆಯಲ್ಲಿ ನಿರತವಾಗಿರುವ ಜನರ ಆದಾಯದ ಮೇಲೆ ರಾಷ್ಟ್ರೀಯ ಆದಾಯವು ವಿತರಣೆಯಾಗುವುದಕ್ಕೆ ವೈಯುಕ್ತಿಕ ವಿತರಣೆ ಎಂದು ಕರೆಯುತ್ತೇವೆ.

**ವಿತರಣೆಯ ಸಿದ್ಧಾಂತಗಳು :-** ವಿತರಣೆಗೆ ಸಂಬಂಧಪಟ್ಟಂತೆ ಪ್ರಮುಖವಾಗಿ 2 ಸಿದ್ಧಾಂತಗಳನ್ನು ನೋಡುತ್ತೇವೆ. ಅವುಗಳೆಂದರೆ

**ಸೀಮಾಂತ ಉತ್ಪಾದಕತೆಯ ಸಿದ್ಧಾಂತ :-** (J. B. ಕ್ಲಾರ್ಕ್) ಈ ಸಿದ್ಧಾಂತವನ್ನು J. B. ಕ್ಲಾರ್ಕ್ ಎಂಬ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಿದ್ದಾರೆ. ನಂತರ ಮಾರ್ಷಲ್‌ರವರು ಈ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಯು ಅನುಕ್ರಮವಾಗಿ ಪಡೆಯುವ ಪ್ರತಿಫಲಗಳಾದ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭವು ಪ್ರಯೋಗ ಉತ್ಪಾದನಾಂಗಗಳ ಸೀಮಾಂತ ಉತ್ಪಾದಕತೆಯನ್ನು ಅವಲಂಬಿಸಿರುತ್ತದೆ. ಉತ್ಪಾದನಾಂಗಗಳ ಸೀಮಾಂತ ಉತ್ಪಾದಕತೆಯು ಉತ್ಪಾದನಾಂಗಗಳ ಪ್ರತಿಫಲವನ್ನು ನಿರ್ಧರಿಸುತ್ತದೆ. ಸೀಮಾಂತ ಉತ್ಪಾದಕತೆ ಎಂದರೆ ಒಂದು ಹೆಚ್ಚುವರಿ ಉತ್ಪಾದನಾಂಗದ ಘಟಕವನ್ನು ಉಪಯೋಗಿಸುವುದರಿಂದ ಉತ್ಪಾದಕನು ಪಡೆಯುವ ಹೆಚ್ಚುವರಿ ಉತ್ಪನ್ನವಾಗಿದೆ.

ಸೀಮಾಂತ ಉತ್ಪಾದಕತೆಯು ಜಾಸ್ತಿ ಇದ್ದರೆ ಅದಕ್ಕೆ ದೊರೆಯುವ ಪ್ರತಿಫಲವು ಜಾಸ್ತಿ ಇರುತ್ತದೆ.

ಸೀಮಾಂತ ಉತ್ಪಾದಕತೆಯು ೨ ವಿಧಗಳಲ್ಲಿ ವ್ಯಕ್ತವಾಗುತ್ತದೆ.

a. ಸೀಮಾಂತ ಭೌತಿಕ ಉತ್ಪನ್ನ
b. ಸೀಮಾಂತ ಆದಾಯ ಉತ್ಪನ್ನ

ನಿರ್ದಿಷ್ಟವಾದ ಉತ್ಪಾದನಾಂಗಗಳಿಂದ ಘಟಕವನ್ನು ಅಧಿಕವಾಗಿ ಅಥವಾ ಹೆಚ್ಚುವರಿಯಾಗಿ ಪಡೆಯುವ ಹೆಚ್ಚುವರಿ ಭೌತಿಕ ಉತ್ಪನ್ನಕ್ಕೆ ಸೀಮಾಂತ ಭೌತಿಕ ಉತ್ಪನ್ನ ಎಂದು ಕರೆಯುತ್ತೇವೆ.

ಅದೇ ರೀತಿ ನಿರ್ದಿಷ್ಟವಾದ ಉತ್ಪಾದನಾಂಗಗಳಿಂದ ಘಟಕವನ್ನು ಅಧಿಕವಾಗಿ ಅಥವಾ ಹೆಚ್ಚುವರಿಯಾಗಿ ಪಡೆಯುವ ಹೆಚ್ಚುವರಿ ಆದಾಯವನ್ನು ಸೀಮಾಂತ ಆದಾಯ ಉತ್ಪನ್ನ ಎನ್ನುತ್ತೇವೆ.

ಈ

**ಈ ಸಿದ್ಧಾಂತದ ಕಲ್ಪನೆಗಳು :-** ಸೀಮಾಂತ ಉತ್ಪಾದಕತೆಯ ವಿತರಣೆಯ ಸಿದ್ಧಾಂತವು ಈ ಕೆಳಗಿನ ಕಲ್ಪನೆಗಳ ಆಧಾರದ ಮೇಲೆ ರಚಿಸಲ್ಪಟ್ಟಿದೆ.

1) ಉತ್ಪಾದನಾಂಗಗಳ ಮಾರುಕಟ್ಟೆಯಲ್ಲಿ ಪರಿಪೂರ್ಣ ಸ್ಪರ್ಧೆ ಇರುತ್ತದೆ.
2) ಉತ್ಪಾದನಾಂಗಗಳು ಪೂರ್ಣವಾದ ಚಲನೆಯನ್ನು ಹೊಂದಿರುತ್ತವೆ.
3) ಪೂರ್ಣ ಉದ್ಯೋಗದ ಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳಲಾಗಿದೆ.
4) ಉತ್ಪಾದನಾಂಗಗಳಲ್ಲಿ ಬದಲಾವಣೆ ಇರುವುದಿಲ್ಲ.
5) ಎಲ್ಲಾ ಘಟಕಗಳು ಸಮಾನ ಸಾಮರ್ಥ್ಯವನ್ನು ಹೊಂದಿರುತ್ತವೆ.

ಈ ಸಿದ್ಧಾಂತವನ್ನು ಈ ಕೆಳಗಿನ ರೇಖಾಚಿತ್ರದ ಮೂಲಕ ಈ ರೀತಿ ವಿವರಿಸಲಾಗಿದೆ.




ಮೇಲಿನ ರೇಖಾಚಿತ್ರದಲ್ಲಿ MRP ಸೀಮಾಂತ ಆದಾಯ ರೇಖೆಯಾಗಿದ್ದು ಎಡದಿಂದ ಬಲಕ್ಕೆ ಇಳಿಮುಖವಾಗಿದೆ. ಉತ್ಪತ್ತಿಯು om ಇದ್ದಾಗ ಪ್ರತಿಫಲವು OP ಬೆಲೆಯಲ್ಲಿರುವುದನ್ನು ತೋರಿಸಲಾಗಿದೆ.

ಉತ್ಪಾದನಾಂಗದ ಪ್ರತ್ಯೇಕತೆಯು OM ನಿಂದ OM, ಗೆ ಹೆಚ್ಚಾದಾಗ ಪ್ರತಿಫಲವು
OP, ಆಗಿದೆ. ಇದರಿಂದ ಉತ್ಪಾದನಾಂಗದ ಪ್ರತ್ಯೇಕ ಹೆಚ್ಚಾದಂತೆಲ್ಲಾ
ಅದರ ಸೀಮಾಂತ ಉತ್ಪಾದಕತೆ ಕಡಿಮೆಯಾಗುತ್ತಾ ಹೋಗುತ್ತದೆ ಆದ್ದರಿಂದ
ಉತ್ಪಾದಕನು ಸೀಮಾಂತ ಉತ್ಪನ್ನಕ್ಕೆ ಬೆಲೆ ಸಮನಾಗುವವರೆಗೆ
ಉತ್ಪಾದನಾಂಗದ ಬೇಡಿಕೆಯನ್ನು ಹೆಚ್ಚಿಸಿ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾನೆ.
ಕೇ ಸಿ

ಈ ಸಿದ್ಧಾಂತದ ಟೀಕೆಗಳು :-

1) ಈ ಸಿದ್ಧಾಂತವು ಉತ್ಪಾದನಾಂಗಗಳ ಮಾರುಕಟ್ಟೆಯಲ್ಲಿ ಪರಿಪೂರ್ಣ ಸ್ಪರ್ಧೆ ಇರುತ್ತದೆ ಎಂದಿದೆ ಆದರೆ ವಾಸ್ತವಿಕವಾಗಿ ಅಪರಿಪೂರ್ಣ ಸ್ಪರ್ಧೆ ಇರುತ್ತದೆ.

2) ಎಲ್ಲಾ ಘಟಕಗಳಲ್ಲಿ ಪೂರ್ಣ ಉದ್ಯೋಗವು ಇರುತ್ತದೆ ಎಂದು ಕಲ್ಪಿಸಲಾಗಿದೆ. ಆದರೆ ವಾಸ್ತವಿಕವಾಗಿ ಇದು ಸಾಧ್ಯವಿಲ್ಲ.

3) ಉತ್ಪಾದನಾಂಗಗಳು ಪರಿಪೂರ್ಣ ಚಲನೆಯನ್ನು ಹೊಂದಿರಲು ಸಾಧ್ಯವಿಲ್ಲ.

4) ಆಧುನಿಕ ಅರ್ಥಶಾಸ್ತ್ರಜ್ಞರ ಪ್ರಕಾರ ಪ್ರತಿಫಲವು ಸೀಮಾಂತ ಉತ್ಪಾದನೆಯಿಂದ ನಿರ್ಧಾರವಾಗದೆ ಉತ್ಪಾದನಾಂಗಗಳ ಬೇಡಿಕೆ ಮತ್ತು ಪೂರೈಕೆಯಿಂದ ನಿರ್ಧಾರವಾಗುತ್ತದೆ.

5) ಸೀಮಾಂತ ಉತ್ಪಾದಕತೆಯನ್ನು ಅಳೆಯುವುದು ಮತ್ತು ನಿರ್ಧರಿಸುವುದು ಸುಲಭದ ಕೆಲಸವಲ್ಲ.

6) ಈ ಸಿದ್ಧಾಂತವು ಸ್ಥಿರ ಪ್ರತಿಫಲ ನಿಯಮದ ಆಧಾರದ ಮೇಲೆ ರಚಿತವಾಗಿರುವುದರಿಂದ ವಾಸ್ತವಿಕತೆಗೆ ದೂರವಾಗಿದೆ.

7) ಈ ಸಿದ್ಧಾಂತವು ಬೇಡಿಕೆಯ ಕಡೆಯಿಂದ ಉತ್ಪಾದನಾಂಗಗಳ ಬೆಲೆ ನಿರ್ಧಾರದ ಬಗ್ಗೆ ತಿಳಿಸುತ್ತದೆಯೇ ಹೊರತು ಪೂರೈಕೆಯ ಕಡೆಯಿಂದ ಇವುಗಳ ಪ್ರತಿಫಲದ ನಿರ್ಧಾರದ ಬಗ್ಗೆ ಅಲ್ಲ.

Scanned by CamScanner